11. The Karnataka Tax on professions, Traders Calling and Employments (Amendment) Bill, 1981.
12. The Karnataka Civil and Small Canses (Courts) (Amendment) Bill, 1981.
13. The Karnataka Sales Tax (Amendment) Bill, 1981.
14. The Karnataka Legislature Salaries (Amendment) Bill, 1981
15. The Karnataka Ministers Salaries (Amendment) Bill, 1981.
16. The Karnataka Silk Worm Seed, Cocoon and Silk Yarn (Regulation of production, Supply, Distribution and Sale) (Amendment) Bill, 1981.

ಅಧ್ಯಕ್ಷರು.—ಮಾನ್ಯ ಹನುಮೇಗೌಡರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ.– ನಾನು ಬೆಳಿಗ್ಗೆ ಹೇಳಿದ ವಿಚಾರವನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ, ಸಮಯ ಬಂದಾಗ ತಿಳಿಸುತ್ತೇನೆ.

ಅಧ್ಯಕ್ಷರು.—ಹಾಗಲ್ಲ, ತಮ್ಮ ವೈಯಕ್ತಿಕಕ್ಕೆ ಸಂಬಂಧಪಟ್ಟ ವಿಚಾರಗಳು ನಡುವಳಿಕೆಯಲ್ಲಿ ಹೋಗತಕ್ಕದ್ದು. ಬಾಕಿಯದು ಹೋಗತಕ್ಕದ್ದಲ್ಲ ಎಂದು.....

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ ೨-೩ ಜನ ಸೇರಿದ್ದಾರೆಂದು ನಾನು ಹೇಳಿದ್ದೇನೆ. ಅದನ್ನು ಸಂದರ್ಭ ಬಂದಾಗ ತಿಳಿಸುತ್ತೇನೆ. ಉಳಿದ ವಿಚಾರ ಪ್ರೊಸೀಡಿಂಗ್ಸ್‌ನಲ್ಲಿ ಬಂದರೆ ಏನು ತಪ್ಪಾಗುತ್ತದೆ ಸ್ವಾಮಿ?

ಅಧ್ಯಕ್ಷರು.—ಹಾಗಲ್ಲ, ತಾವು ಮಾತನಾಡುವಾಗ '' ಈ ಮನೆಯ ಸದಸ್ಯರು' ಎನ್ನುವ ಪದವನ್ನು ಏನು ಉಪಯೋಗಿಸಿದ್ದೀರಿ ಅದನ್ನು ವಿತ್‌ಡ್ರಾ ಮಾಡಬೇಕು. ತಾವು ಅದನ್ನು ವಿತ್‌ಡ್ರಾ ಮಾಡಿದರೆ ಆಗ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ.—ಇದು ಮೇಲ್ಮನೆಯಲ್ಲಿ.....

ಅಧ್ಯಕ್ಷರು.—ಇದು ಮೇಲ್ಮನೆಯ ಪ್ರಶ್ನೆಯಲ್ಲ. ಈಗಾಗಲೇ ೭ ಗಂಟೆಯಾಗುತ್ತಿದೆ. ಮತ್ತೆ ಬೆಳಿಗ್ಗೆ ೯ ಗಂಟೆಗೆ ನಾವು ಸೇರುವವರಿದ್ದೇವೆ.....

ಶ್ರೀ ಕೆ ಹೆಚ್. ಹನುಮೇಗೌಡ.—ನಾನು ಸಂದರ್ಭ ಬಂದಾಗ ಇದನ್ನು ತಿಳಿಸುತ್ತೇನೆ. ಆದರೆ ಇವತ್ತು ನಾನು ಹೇಳುವುದಿಲ್ಲ.

ಅಧ್ಯಕ್ಷರು.—ನಾನು, ತಮಗೆ ಹೇಳುವುದೇನೆಂದರೆ, '' ಈ ಮನೆಯ ಸದಸ್ಯರು ''ಎಂಬ ಶಬ್ದವನ್ನು ತಾವು ಏನು ಬಳಸಿದ್ದೀರಿ, ಅದನ್ನು ವಿತ್‌ಡ್ರಾ ಮಾಡಿದರೆ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆ ಪದ ಇರಲಿ ಎಂದು ತಾವು ಹೇಳುವುದಾದರೆ ಆಗ ಮುಂದಿನ ಪ್ರಶ್ನೆ ಬೇರೆಯಾಗುತ್ತದೆ. ಇಲ್ಲದಿದ್ದರೆ ನಾನು ಏನು ಮಾಡಬೇಕಾಗುತ್ತದೆಂದರೆ, ತಮ್ಮ ವೈಯಕ್ತಿಕ ವಿಚಾರಕ್ಕೆ ಸಂಬಂಧಪಟ್ಟಂತೆ ಪತ್ರಿಕೆಯಲ್ಲಿ ಏನು ಬಂತು, ಅದಕ್ಕೆ ತಾವು ಏನು ವಿವರಣೆಯನ್ನು ಕೊಟ್ಟಿರಿ ಅಷ್ಟು ಮಾತ್ರ ನಡವಳಿಕೆಯಲ್ಲಿ ಉಳಿಸಿ ಬಾಕಿಯದನ್ನು ಎಕ್ಸ್‌ಪಂಜ್ ಮಾಡಿಸಬೇಕಾಗುತ್ತದೆ. ಈಗ ಅದು ಇರಲಿ ಎನ್ನುವ ಪ್ರಶ್ನೆ ಆದರೆ ಆ ಮಾತೇ ಬೇರೆ. ನಾನು ಏನು ಮಾಡಬೇಕಾಗುತ್ತದೆಂದರೆ, ತಾವು ತಮ್ಮ ವೈಯಕ್ತಿಕವಾದ ವಿಚಾರ ತಮ್ಮ ಭೂಮಿಗೆ ಸಂಬಂಧಪಟ್ಟಹಾಗೆ, ಅದಕ್ಕೆ ಪತ್ರಿಕೆಯಲ್ಲಿ ವಿವರಣೆ ಏನು ಕೊಟ್ಟಿದ್ದೀರಿ ಅಷ್ಟುಮಾತ್ರ ನಡುವಳಿಕೆಯಲ್ಲಿ ಉಳಿಸಿಕೊಂಡು ಬಾಕಿ ವಿಚಾರವನ್ನು ಎಕ್ಸ್‌ಪಂಜ್ ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ತಮಗೆ ಏನು ಸೂಕ್ತವಾಗಿ ತೋರುತ್ತದೋ ಆರೀತಿ ಮಾಡಿ.

ಅಧ್ಯಕ್ಷರು.—ಹಾಗಲ್ಲ, ಹಾಗಲ್ಲ, ತಾವು ಹೀಗೆ ಮಾತನಾಡಿದರೆ ಹೇಗೆ, ನನ್ನವೇಲೆ ಏತಕ್ಕೆ ಬಾರ ಹೊರಿಸುತ್ತೀರಿ.

ಶ್ರೀ ಕೆ.ಎಚ್. ಹನುಮೇಗೌಡ.--ಅಲ್ಲ ಸ್ವಾಮಿ ನನಗೇನು ನೋವಿಲ್ಲ. ಈಗ ಶಾಸಕರು ಎಂದು ಹೇಳಿರುವ ಪದವನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇನೆ. ಸಂದರ್ಭ ಬಂದಾಗ ತಿಳಿಸುತ್ತೇನೆ. ಶಾಸಕರು ಎಂದು ಹೇಳಿರುವ ಪದವನ್ನು ವಿತ್‌ಡ್ರಾ ಮಾಡಿಕೊಂಡಿರುತ್ತೇನೆ.

ಅಧ್ಯಕ್ಷರು.--ಈ ಮನೆಯು ಶಾಸಕರು ಎಂದು ಬಳಸಿರತಕ್ಕಂಥ ಪದವನ್ನು ಮಾನ್ಯ ಸದಸ್ಯರು ವಾಪಸ್ ತೆಗೆದುಕೊಂಡಿರುತ್ತಾರೆ,

ಶ್ರೀ ಕೆ. ಪ್ರಭಾಕರ್.--ಈಗ ಮಾನ್ಯ ಸದಸ್ಯರು ಹೇಳಿದುಂಥ ಮಾತುಗಳನ್ನು ಕೇಳಿದ್ದೇವೆ. ವಿಷಯ ತೀರ್ಮಾನಕ್ಕೆ ಬರುವಾಗ ಏನಾಗುತ್ತದೆಂದು ಹೇಳಿದ್ದಾರೆ. ಇದರಬಗ್ಗೆ ಸಮಸ್ಯಾತ್ಮಕವಾಗಿದೆ. ವಿಷಯ ಸಮಸ್ಯಾತ್ಮಕವಾದಾಗ ಏನು ಮಾಡುತ್ತಾರೆಂದರೆ ಅವರ ಹತ್ತಿರ ಮೂರು ನಾಲ್ಕು ಜನರು ಸೇರಿಕೊಳ್ಳುತ್ತಾರೆ. ನಾನು ೨೫ ವರ್ಷಗಳಿಂದಲೂ ನೋಡುತ್ತಿದ್ದೇನೆ, ಇಂಥದ್ದು ಆಗಿರಲಿಲ್ಲ ವಿಷಯ ಏನೆಂದರೆ ಅವರ ಕೈಹಿಡಿದು ಎಳೆಯುವುದು, ಆಚೆಗೆ ಕರೆದುಕೊಂಡು ಹೋಗುವುದು Taking away the freedom of the member to express legally and usually ಇದು ಆಗಬಾರದು I want ruling from the Chair.

SRI A LAKSHMISAGAR.—Sir he is bound to be free he is ought to be free as a member under the sun. But it appears that he is under strain.

ಶ್ರೀ ಬಿ. ಭಾಸ್ಕರಶೆಟ್ಟಿ.--ಸ್ವಾಮಿ ಅವರು ಪ್ರೀಯಾಗಿಯೇ ಇದ್ದಾರೆ. ಅವರ ಮೇಲೆ ಯಾರು ಇಂಟರ್‌ಪೀಯರ್ ಆಗಿಲ್ಲ.

ಅಧ್ಯಕ್ಷರು.--ಈಗ ಮಾನ್ಯ ಪ್ರಭಾಕರ್‌ರವರು ಅವರ ಮೇಲೆ ಹೇಳಿದಮೇಲೆ ರೂಲಿಂಗ್ ಕೊಡು ವಂಥ ವಿಷಯ ಪ್ರಸ್ತಾಪ ಮಾಡಿಲ್ಲ. ಈ ಮನೆಯಲ್ಲಿ ತಮ್ಮ ಎದುರಿಗೇನೆ ಕೊಯರ್‌ಶನ್ ಇಂಟಿಮಿಡಿ ಯೇಷನ್ ಏನು ಆಗತ್ತಿಲ್ಲ. ಆದ್ದರಿಂದ ಇಲ್ಲಿ ರೂಲಿಂಗ್ ಕೊಡತಕ್ಕಂಥದ್ದು ಉದ್ಭವವಾಗುವುದಿಲ್ಲ.

ಸಭೆ ಈ ದಿವಸದ ಕಾರ್ಯಕಲಾಪಗಳನ್ನು ಮುಗಿಸಿ ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಸೇರುವುದಕ್ಕೆ ಮುಂದುವರಿಸಿದ್ದೇನೆ.

The House adjourned at ten Minutes past seven of the clock to meet again at nine of the Clock on Friday, the 27th March 1981.